# ರಂಜನಿ

## ಸ್ವಪ್ನ ಮಂಟಪ

‘ಕಲಾವಿದರ ಸಂಪೂರ್ಣ ಸಾಮರ್ಥ್ಯವನ್ನು ಹೊರತೆಗೆಯುವುದು ಒಬ್ಬ ಉತ್ತಮ ನಿರ್ದೇಶಕನಿಂದ ಸಾಧ್ಯ’ ಎಂದಿದ್ದಾರೆ ನಟಿ ರಂಜನಿ ರಾಘವನ್.

ಏಪ್ರಿಲ್ 12ಕ್ಕೆ ರಂಜನಿ ನಟನೆಯ ‘ನೈಟ್ ಕರ್ಫ್ಯೂ’ ಸಿನಿಮಾ ಬಿಡುಗಡೆಯಾಗಲಿದೆ. ನಟ ವಿಜಯ್ ರಾಘವೇಂದ್ರ ಜೊತೆ, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸುತ್ತಿರುವ ‘ಸ್ವಪ್ನ ಮಂಟಪ’ ಸಿನಿಮಾದಲ್ಲಿಯೂ ರಂಜನಿ ನಟಿಸುತ್ತಿದ್ದಾರೆ.

ತಮ್ಮ ಸಿನಿಮಾಗಳ ಬಗ್ಗೆ ಮಾತನಾಡುತ್ತಾ, ‘ಒಬ್ಬ ಕಲಾವಿದನಲ್ಲಿ ಅಡಗಿರುವ ಕೌಶಲ, ಪ್ರತಿಭೆಯನ್ನು ಒಳ್ಳೆಯ ನಿರ್ದೇಶಕ ಖಂಡಿತವಾಗಿ ಗುರುತಿಸಬಲ್ಲನು. ಅದನ್ನು ಸಮರ್ಥವಾಗಿ ಹೊರತರಬಲ್ಲನು ಎಂಬುದು ನನ್ನ ನಂಬಿಕೆ. ನಿರ್ದೇಶಕನಿಗೆ ನಟ ಅಥವಾ ನಟಿಯ ಮೇಲೆ ಆತ್ಮವಿಶ್ವಾಸ ಇಲ್ಲದಿದ್ದರೆ, ಅದು ಕಲಾವಿದರಿಗೆ ಸವಾಲಾಗುತ್ತದೆ. ಜನರಿಗೂ ರೀಚ್ ಆಗಲು ಕಷ್ಟವಾಗುತ್ತದೆ’ ಎಂದು ವಿವರಿಸಿದ್ದಾರೆ.

ಇನ್ನೂ ಮುಂದುವರೆದು, ‘ನಾನು ಸಿನಿಮಾ ಸೆಟ್‌ಗೆ ಖಾಲಿ ಕ್ಯಾನ್ವಾಸ್‌ನಂತೆ ಬರಲು ಇಷ್ಟಪಡುತ್ತೇನೆ. ಇದು ನನ್ನನ್ನು ಹೊಸತನ್ನು ಎಕ್ಸ್‌ಪ್ಲೋರ್ ಮಾಡಲು, ಹಾಗೆಯೇ ನಿರ್ದೇಶಕರು ತಮ್ಮ ಕಲ್ಪನೆಯನ್ನು ನಮ್ಮಲ್ಲಿ ತುಂಬಲು ಸಹಾಯ ಮಾಡುತ್ತದೆ. ನಿರ್ದೇಶಕರು ಕಲಾವಿದರನ್ನು ನಂಬುವುದು ಮಾತ್ರವಲ್ಲ, ನಿರ್ದೇಶಕರನ್ನು ಕಲಾವಿದರು ನಂಬುವುದು ಕೂಡ ಮುಖ್ಯ’ ಎಂದಿದ್ದಾರೆ.

ತಮ್ಮ ಮುಂದಿನ ಹಾದಿಯ ಕುರಿತು ಮಾತನಾಡುತ್ತಾ, ‘ನನಗೆ ಸ್ಟ್ರಾಂಗ್ ಆದ ಮಹಿಳಾ ಪಾತ್ರಗಳನ್ನು ಮಾಡಬೇಕೆಂಬ ಆಸೆಯಿದೆ. ನನ್ನ ಮುಂಬರುವ ಸಿನಿಮಾದಲ್ಲಿ ಡಬಲ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಇದು ನನಗೆ ರಿಫ್ರೆಶಿಂಗ್, ಚಾಲೆಂಜಿಂಗ್ ಕೂಡ ಅನ್ನಿಸಿದೆ’ ಎಂದಿದ್ದಾರೆ. ■





# ರಿಷಿಯ ‘ರಾಮನ ಅವತಾರ’

‘ಆಪರೇಷನ್ ಅಲಮೇಲಮ್ಮ’ ಖ್ಯಾತಿಯ ರಿಷಿ ನಾಯಕನಾಗಿ ನಟಿಸಿರುವ ‘ರಾಮನ ಅವತಾರ’ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ.

‘ರಾಮನ ಅವತಾರ’ ಹಾಸ್ಯ ಕಥಾಹಂದರದ ಚಿತ್ರವಾಗಿದ್ದು, ರಿಷಿ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈಚೆಗೆ ವಿಶೇಷ ವಿಡಿಯೊ ಮೂಲಕ ಸಿನಿಮಾ ಬಿಡುಗಡೆ ದಿನಾಂಕವನ್ನು ರಿಷಿ ಘೋಷಣೆ ಮಾಡಿದ್ದಾರೆ.

ರೊಮ್ಯಾಂಟಿಕ್ ಕಾಮಿಡಿ ಜಾನರ್‌ನ ಈ ಸಿನಿಮಾ ಕಳೆದ ವರ್ಷ ಜೂನ್‌ನಲ್ಲಿಯೇ ತೆರೆಗೆ ಬರುವ ಸಿದ್ಧತೆ ನಡೆಸಿತ್ತು. ಕೆಲವು ಕಾರಣಗಳಿಂದ ಸಾಧ್ಯವಾಗದೇ ಇದೀಗ ವರ್ಷದ ನಂತರ, ಅಂದರೆ, ಇದೇ ಮೇ 10ರಂದು ಬಿಡುಗಡೆಯಾಗುತ್ತಿದೆ.

ಸಿನಿಮಾ ಬಿಡುಗಡೆ ಸಂಬಂಧ ಮಾತನಾಡಿರುವ ರಿಷಿ, ‘ಮೇ 8 ಅಲ್ಲ ಪಕ್ಕ ಮೇ 10ಕ್ಕೆ ಬರುತ್ತೇವೆ. ಎಲೆಕ್ಷನ್ ರಿಸಲ್ಟ್‌ಗೂ ಮೊದ್ಲೇ ನಮ್ಮ ಸಿನಿಮಾ ರಿಸಲ್ಟ್ ಬರಲಿದೆ’ ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಹಾಸ್ಯಮಯ ಕಥಾ ಹಂದರದ ಈ ಚಿತ್ರವನ್ನು ವಿಕಾಸ್ ಪಂಪಾಪತಿ ನಿರ್ದೇಶಿಸಿದ್ದಾರೆ. ಸ್ಟಾರ್ ಫ್ಯಾಬ್ ಪ್ರೊಡಕ್ಷನ್ ಅಡಿಯಲ್ಲಿ ‘ಆಪರೇಷನ್ ಅಲಮೇಲಮ್ಮ’ ಸಿನಿಮಾ ನಿರ್ಮಾಣ ಮಾಡಿದ್ದ ಅಮರೇಜ್ ಸೂರ್ಯವಂಶಿ ಬಂಡವಾಳ ಹೂಡಿದ್ದಾರೆ. ಪ್ರಣೀತಾ ಸುಭಾಷ್ ಹಾಗೂ ಶುಭ್ರ ಅಯ್ಯಪ್ಪ ನಾಯಕಿಯರಾಗಿ ನಟಿಸಿದ್ದು, ಅರುಣ್ ಸಾಗರ್ ಮುಖ್ಯಭೂಮಿಕೆಯಲ್ಲಿದ್ದಾರೆ. ■